# ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ:ಕವಿಪ/ಆ-1/52/ಸು/2023

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ:5079, ವಿಧಾನ ಸೌಧ,
ಬೆಂಗಳೂರು-560 001, ದಿನಾಂಕ:24.11.2023.

**ಸುತ್ತೋಲೆ**

ವಿಷಯ: ದಿನಾಂಕ:26.11.2023ರಂದು ರಾಜ್ಯಾದ್ಯಂತ "ಸಂವಿಧಾನ ದಿನ"ವನ್ನು ಆಚರಿಸುವ ಬಗ್ಗೆ.

ಉಲ್ಲೇಖ: DPAR/09/PHL/2023, ದಿನಾಂಕ:20.11.2023.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದನ್ವಯ ಪ್ರತಿ ವರ್ಷ ನವೆಂಬರ್ 26ರಂದು "ಸಂವಿಧಾನ ದಿನ"ವನ್ನು ಆಚರಿಸುವಂತೆ ತಿಳಿಸಿದ್ದು, ಭಾರತದ ಸಂವಿಧಾನವನ್ನು ಅಂಗೀಕರಿಸಿದ ನೆನಪಿಗಾಗಿ **"ಸಂವಿಧಾನ ದಿನ"ವನ್ನು ಆಚರಿಸಲು ನಿರ್ಧರಿಸಲಾಗಿರುತ್ತದೆ**.

ಆದುದರಿಂದ, **"ಸಂವಿಧಾನ ದಿನ"** ಆಚರಣೆಯ ಸಂಬಂಧ **ದಿನಾಂಕ:26.11.2023 ರಂದು** ಈ ಕೆಳಗೆ ನಮೂದಿಸಿರುವ ವೆಬ್ ಪೋರ್ಟಲ್(ಆನ್‌ಲೈನ್)ನಲ್ಲಿ ಭಾರತದ ಸಂವಿಧಾನ ಪ್ರಸ್ತಾವನೆಯನ್ನು ಓದುವುದರ ಮೂಲಕ ಮತ್ತು ಸಂವಿಧಾನದ ಮೌಲ್ಯಗಳು/ಮೂಲ ಆಶಯಗಳ ಬಗ್ಗೆ ಚರ್ಚೆ/ರಸಪ್ರಶ್ನೆ ಕಾರ್ಯಕ್ರಮಗಳಲ್ಲಿ ಈ ಸಚಿವಾಲಯದ ಎಲ್ಲಾ ಅಧಿಕಾರಿ/ನೌಕರರುಗಳು ತಮ್ಮ ಕುಟುಂಬ ವರ್ಗ ಹಾಗೂ ಸ್ನೇಹಿತರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದರೊಂದಿಗೆ **''ಸಂವಿಧಾನ ದಿನ''**ವನ್ನು ಅರ್ಥಪೂರ್ಣವಾಗಿ ಆಚರಿಸಬೇಕೆಂದು ಹಾಗೂ ಈ ಸಂಬಂಧ ಸರ್ಕಾರದ ವತಿಯಿಂದ ವಿಧಾನ ಸೌಧದ 3ನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣ ಕೊಠಡಿ ಸಂಖ್ಯೆ:334ರಲ್ಲಿ **ಬೆಳಗ್ಗೆ:9.45 ಗಂಟೆಗೆ** ಏರ್ಪಡಿಸಿರುವ **''ಸಂವಿಧಾನ ದಿನ'' ಆಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು** ಈ ಮೂಲಕ ತಿಳಿಸಲಾಗಿದೆ. (ವೆಬ್ ಸೈಟ್ ವಿಳಾಸ **readpreamble.nic.in)**

24/11/23

(ಕೆ.ಜೆ. ಜಲಜಾಕ್ಷಿ)
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಗೆ:

ವಿಧಾನ ಪರಿಷತ್ತಿನ ಸಚಿವಾಲಯದ ಎಲ್ಲಾ ಅಧಿಕಾರಿ/ನೌಕರರುಗಳಿಗೆ(ಶಾಸಕರ ಭವನವು ಸೇರಿದಂತೆ).

<u>ಪ್ರತಿಗಳು:</u>

1. ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರ ಕಾರ್ಯದರ್ಶಿಯವರಿಗೆ/ವಿಶೇಷ ಕರ್ತವ್ಯಾಧಿಕಾರಿಯವರಿಗೆ, ಕವಿಪ.
2. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.
3. ಅಪರ/ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರಿಗೆ, ಕವಿಪ.
4. ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಗಣಕ ಕೇಂದ್ರ, ಕವಿಪ.
5. ರಕ್ಷಾ ಕಡತಕ್ಕೆ/ಸೂಚನಾ ಫಲಕಕ್ಕೆ/ಬಿಡಿ ಪ್ರತಿಗಳು.

ಪ್ರ.ತಿ. ನೋ.....

सत्यमेव जयते

# <u>ಭಾರತದ ಸಂವಿಧಾನ</u>

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು **ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ**;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ**; ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

ನಮ್ಮ ಸಂವಿಧಾನ ಸಭೆಯಲ್ಲಿ 1949 ನೇ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.



Generated from eOffice by Manoj M Hegde, DPAR-POL-ASST(MH), ASSISTANT, DPAR on 28/11/2023 10:09 AM